ಓ.ಎಸ್.ನಂ.59/2021　　　　　　　　　　ಪಿ.ಡಬ್ಲ್ಯೂ-1/ದ್ಯಾವೇಗೌಡ

ದಿನಾಂಕ 23.09.2022 ರಂದು ಸಾಕ್ಷಿಗೆ ಪ್ರಮಾಣ ವಚನ ಮಾಡಿಸಿದೆ.

**ಮುಖ್ಯ ವಿಚಾರಣೆ:- ವಾದಿ ಪರ ಶ್ರೀ ಹೆಚ್.ಎಸ್.ಕೆ ವಕೀಲರಿಂದ**

ನನ್ನ ಮುಖ್ಯ ವಿಚಾರಣೆ ಬದಲಿಗೆ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು ಅದರಲ್ಲಿರುವ ಸಂಗತಿಗಳು ಸತ್ಯವಾಗಿರುತ್ತವೆ. ನಾನು ಅದನ್ನು ಓದಿ ತಿಳಿದುಕೊಂಡು ಸಹಿ ಮಾಡಿರುತ್ತೇನೆ. ಈ ಕೇಸಿಗೆ ಸಂಬಂದಪಟ್ಟ ದಾಖಲೆಗಳನ್ನು ಹಾಜರುಪಡಿಸಿದ್ದೇನೆ.

ಪ್ರತಿವಾದಿ ಮಾಡಿಕೊಟ್ಟ ಕ್ರಯದ ಕರಾರು ಪತ್ರವನ್ನು ಸಾಕ್ಷಿ ಗುರುತಿಸಿದ್ದು ಅದನ್ನು ನಿಪಿ1 ಎಂದು ಅದರಲ್ಲಿರುವ ಪ್ರತಿವಾದಿಯ 5 ಸಹಿಗಳನ್ನು ಒಟ್ಟಾಗಿ ನಿಪಿ1 ಎ ಎಂದು ಗುರುತಿಸಲಾಯಿತು. ಸದರಿ ಪತ್ರಕ್ಕೆ ಸಾಕ್ಷಿಯಾಗಿ ಬೋಳಾರಿಗೌಡ ಮತ್ತು ಶ್ರೀನಿವಾಸರವರು ಸಹಿ ಮಾಡಿರುತ್ತಾರೆ. ಸದರಿ ಸಹಿಗಳನ್ನು ಕ್ರಮವಾಗಿ ನಿಪಿ1 ಬಿ ಮತ್ತು ನಿಪಿ1 ಸಿ ಎಂದು ಗುರುತಿಸಲಾಯಿತು. ಸದರಿ ಪತ್ರಕ್ಕೆ ಬಿಕ್ಲಂದಾರರು ವೆಂಕಟರಾಮುರವರು ಆಗಿರುತ್ತಾರೆ. ಸಾಕ್ಷಿ ಗುರುತಿಸಿದ ಅವರ ಸಹಿಯನ್ನು ನಿಪಿ1 ಡಿ ಎಂದು ಗುರುತಿಸಲಾಯಿತು. ಸದರಿ ಪತ್ರಕ್ಕೆ ನಾನು ಕೂಡ ಸಹಿ ಮಾಡಿದ್ದು, ಸಾಕ್ಷಿಯ 3 ಸಹಿಗಳನ್ನು ಒಟ್ಟಾಗಿ ನಿಪಿ1 ಇ ಎಂದು ಗುರುತಿಸಲಾಯಿತು. ಒಂದು ಪಹಣಿ ಪತ್ರಿಕೆಯನ್ನು ನಿಪಿ2 ಎಂದು, ನೋಟೀಸಿನ ಕಛೇರಿ ಪ್ರತಿಯನ್ನು ನಿಪಿ3 ಎಂದು, ಅಂಚೆ ರಶೀದಿಯನ್ನು ನಿಪಿ4 ಎಂದು, ಅಂಚೆ ಸ್ವೀಕೃತಿ ಪತ್ರವನ್ನು ನಿಪಿ5 ಎಂದು ಗುರುತಿಸಲಾಯಿತು.

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಸಾಕ್ಷಿಗೆ ಓದಿ ಹೇಳಿ ಕೇಳಿ ಸರಿ ಇದೆ.

(ಶಮೀರ್.ಪಿ.ನಂದ್ಯಾಲ್)
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ ಕೆ.ಆರ್.ಪೇಟೆ.